ತುಮಕೂರು ಡಿಸ್ಟ್ರಿಕ್ಟ್.

ತಾರೀಖು 8ನೇ ಜೂ೯ 1887.

ಇದರಿಂದ ಸಂಬಂಧಪಟ್ಟ ಜನಗಳಿಗೆ ತಿಳಿಯಪಡಿಸುವದೇನಂದರೆ, ಗುಬ್ಬಿ ಸಬ್ ರಿಜಿಸ್ಟ್ರಿ ಆಫೀಸಿನಲ್ಲಿ ಬೇವಾರಸ್ ಆಗಿ ಇರತಕ್ಕ ಈ ಕೆಳಗೆ ವಿವರಿಸೋಣವಾಗಿಯಿರುವ ದಸ್ತೈವಜನ್ನ ಹಾಜರ್ಮಾಡಿದವರೆ ಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರು ಯಾ ಹಕ್ಕುದಾರ್ರೆ ಆಗಲಿ ಈ ನೋಟೀಸ್ ತಾರೀಖು ಲಾಗಾಯಿತು ಒಂದು ತಿಂಗಳವಳಗಾಗಿ ಗುಬ್ಬಿ ಸಬ್ ರಿಜಿಸ್ಟ್ರಾರಲ್ಲಿ ಹಾಜರಾಗಿ ಸದರಿ ದಸ್ತೈವಜನ್ನ ವಾಪಸುಪಡಿಯಲು ತಪ್ಪಿದರೆ 1877ನೇ ಇಸವಿ 3ನೇ ನಂಬರ್ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ನಾಶ ಮಾಡಲ್ಪಡುವದು.

ದಸ್ತೈವಜಿನ ನಂಬರ್.	ದಸ್ತೈವಜ್ಜನ್ನ ತಾರೀಖು.	ದಸ್ತೈವಜ್ಜನ್ನ ರಿಜಿಸ್ಟ್ರಿಗೆ ಹಾಜರ್ಮಾಡಿದ ತಾರೀಖು.	ದಸ್ತೈವಜ್ಜನ್ನ ರಿಜಿಸ್ಟ್ರಿ ಆದ ತಾರೀಖು.	ದಸ್ತೈವಜನ್ನ ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜನ್ನ ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತ್ತು.
2 1885—86	28—12—84	16—4—85	16—4—85	ಗುಬ್ಬಿತಾಲ್ಲೂಕು ದೊಡ್ಡಗುಣಿ ಗ್ರಾಮದಲ್ಲಿ ಯಿರುವ ಕೊರಟಿಗೆರೆ ಚನ್ನಬಸಪ್ಪ	ಗುಬ್ಬಿ ತಾಲ್ಲೂಕು ದೊಡ್ಡಗುಣಿ ಗ್ರಾಮದಲ್ಲಿ ಯಿರುವ ಚನ್ನಪ್ಪನ ಮಗ ಕರಿಬಸಪ್ಪ	ತನ್ನ ಬಾಬತು ಕರಿಹಸು 1 ಕೆಂದ ಹಸು 1 ಕೆಂದಹಸುವಿನ ಮಣಕ 1 ಕರಿಹೆಂಣು ಕರಾ 1 ಬಿಳಿ ಹೆಂಣುಕರಾ 1 ಕೆಂದಹೋರಿಕರಾ 1 ಅಂಡಹೋರಿಕರಾ 1 ಕೆಂದಹೆಂಣುಕರಾ1 ಕರಿಹೆಂಣುಕರಾ 1 ಕರಿಹೆಂಣು ಮಣಕ 1 ಕರಿಗಂಡುಕರಾ 2 ಜುವ್ವಾ 12 ರಾಸುಗಳನ್ನ 90 ರೂಪಾಯಿಗಳಿಗೆ ಶುದ್ಧ ಕ್ರಯಕ್ಕೆ ಕೊಟ್ಟು ಯಿರುವದಾಗಿ ಬರದುಕೊಟ್ಟ ಹಣಸಂದ ರಸೀತಿ ಮತ್ತು ಅದರ ಮಲಪ್ಪಾಪಿ ರಿಜಿಸ್ಟ್ರಾಗದೆ ಯಿರುವ ಡಿಟೋ ರಾಸುಗಳ ಖರೀದಿ ಪತ್ರಸಹ.

ಪಿ. ಎಸ್. ಕೃಷ್ಣಮೂರ್ತಿ,
ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 206.

ಮೃತಪಟ್ಟ ವೆಂಕಟರಮಣಕಟ್ಟರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಲಕ್ಷ್ಮೀದೇವಮ್ಮನು, ಮೃತಪಟ್ಟ ಸದರೀ ವೆಂಕಟರಮಣಕಟ್ಟರಿಗೆ ಸಹೋದರನ ಹೆಂಡ್ತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಚಾಮರಾಜ ನಗರದ ಸ್ಥಳದ ಸದರೀ ಲಕ್ಷ್ಮೀದೇವಮ್ಮನು, ಸದರೀ ವಾಸಸ್ಥರಾಗಿ ಮೃತಪಟ್ಟ ವೆಂಕಟರಮಣಕಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.